# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು

## ಸಂಸ್ಥೆಯವತಿಯಿಂದ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ಮಾಹಿತಿ

ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ದಿಗಾಗಿ ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ: ಸಕಇ/28/ಬಿಸಿಎ/90/ದಿನಾಂಕ:31-08-1992 ರಂತೆ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ಸಂಸ್ಥೆಯು ದಿನಾಂಕ: 20-08-1993 ರಿಂದ ಕಾರ್ಯ ನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳ ಹಾಗೂ ಅಲೆಮಾರಿ/ಅರೆಅಲೆಮಾರಿ ಜನಾಂಗಗಳ ಅಧ್ಯಯನ, ಈ ವರ್ಗಗಳಿಗಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ಪ್ಲಾನ್ ಮಾನಿಟರಿಂಗ್, ವಿಚಾರ ಸಂಕಿರಣ, ವಿಚಾರಗೋಷ್ಠಿ, ಕಾರ್ಯಾಗಾರ, ಸಮೀಕ್ಷೆ ಹಾಗೂ ಮೌಲ್ಯಮಾಪನ, ಪ್ರಕಟಣೆ, ಸಾಕ್ಷ್ಯಚಿತ್ರ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು ಈ ಸಂಸ್ಥೆಯ ಧ್ಯೇಯೋದ್ದೇಶವಾಗಿದೆ.

ಈ ಸಂಸ್ಥೆಯ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ.

**ವಿಚಾರ ಸಂಕಿರಣಗಳು :-**

1) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾವಿ, ಇದರ ಸಹಯೋಗದೊಂದಿಗೆ **"ಖಾಸಗಿ ವಲಯದಲ್ಲಿ ಮೀಸಲಾತಿ"(Affirmative action in private sector)** ವಿಷಯ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ.
2) ಡಿ. ದೇವರಾಜ ಅರಸುರವರ ವಿಚಾರಧಾರೆ/ಚಿಂತನೆಗಳ ಬಗ್ಗೆ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ವಿಚಾರ ಸಂಕಿರಣ.
3) **"ಖಾಸಗೀಕರಣ, ಜಾಗತೀಕರಣ ಮತ್ತು ಹಿಂದುಳಿದ ವರ್ಗಗಳು"** ವಿಷಯ ಕುರಿತು ದಕ್ಷಿಣ ಭಾರತ ಮಟ್ಟದ ವಿಚಾರ ಸಂಕಿರಣ.
4) **"ಮೀಸಲಾತಿ ಮತ್ತು ಸ್ಥಳೀಯ ಆಡಳಿತ"** ವಿಷಯ ಕುರಿತು ವಿಭಾಗಮಟ್ಟದ ವಿಚಾರ ಸಂಕಿರಣ
5) **"ಮಹಿಳಾ ಸಬಲೀಕರಣ"** ವಿಷಯ ಕುರಿತು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇದರ ಸಹಯೋಗದೊಂದಿಗೆ ರಾಜ್ಯಮಟ್ಟದ ವಿಚಾರ ಸಂಕಿರಣ
6) ಈ ಕೆಳಕಂಡ ಅತ್ಯಂತ ಹಿಂದುಳಿದ ಜನಾಂಗಗಳ ಸ್ಥಿತಿ-ಗತಿಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣಗಳು:
    1. ಗೌಳಿ
    2. ಹಾಲಕ್ಕಿ ಒಕ್ಕಲ್
    3. ಲಾಡರು
    4. ಹೆಳವ
    5. ಕಾಡುಗೊಲ್ಲ
    6. ದೊಂಬಿದಾಸ
    7. ಗೊಂದಲಿಗ
    8. ಕಟಬು
    9. ಕಮ್ಮಾರ
    10. ಅಲೆಮಾರಿ/ಅರೆ-ಅಲೆಮಾರಿ ಸಮುದಾಯಗಳಲ್ಲಿನ ಮೂಢನಂಬಿಕೆಗಳು

**ವಿಚಾರ ಸಂಕಿರಣಗಳು** :-

1> **ಹಿಂದುಳಿದ ವರ್ಗಗಳ ಮಹಿಳೆಯರ ವೃತ್ತಿಯಲ್ಲಿ ಆಗುವಂತಹ ಅನಾನುಕೂಲಗಳು ಹಾಗೂ ಮೌಢ್ಯಾಚರಣೆ ವಿರುದ್ಧ ಜಾಗೃತಿ ಮೂಡಿಸುವ ರಾಜ್ಯ ಮಟ್ಟದ ವಿಚಾರ ಸಂಕಿರಣ**–ಬೆಂಗಳೂರು

2> **ಭೂರಹಿತ ಕೃಷಿ ಕಾರ್ಮಿಕರ ಜೀವನ ಉನ್ನತೀಕರಣ : ರಾಜ್ಯ ಮಟ್ಟದ ವಿಚಾರ ಸಂಕಿರಣ** –ಬಾಗೇಪಲ್ಲಿ

3> **ಅಲೆಮಾರಿ/ಅರೆಅಲೆಮಾರಿ ಜನಾಂಗಗಳ ಜೀವನ ಉನ್ನತೀಕರಣ : ರಾಜ್ಯ ಮಟ್ಟದ ವಿಚಾರ ಸಂಕಿರಣ** –ಮಂಡ್ಯ

4> **ಡಿ. ದೇವರಾಜ ಅರಸು ರವರ ಆಡಳಿತ ಕಾಲದ ಸುಧಾರಣೆಗಳು** : **ರಾಜ್ಯ ಮಟ್ಟದ ವಿಚಾರ ಸಂಕಿರಣ** ಕೋಲಾರ

5> **ಗೊಲ್ಲ ಜನಾಂಗದಲ್ಲಿನ ಮೂಢನಂಬಿಕೆಗಳ ನಿರ್ಮೂಲನೆ : ರಾಜ್ಯ ಮಟ್ಟದ ವಿಚಾರ ಸಂಕಿರಣ** –ತುಮಕೂರು

6> **ಹಿಂದುಳಿದ ವರ್ಗಗಳ ಒಳವರ್ಗೀಕರಣ ಮತ್ತು ಸಾಮಾಜಿಕ ನ್ಯಾಯ : ರಾಜ್ಯ ಮಟ್ಟದ ವಿಚಾರ ಸಂಕಿರಣ** –ಬೆಂಗಳೂರು

7> **ಹಾವನೂರು ಆಯೋಗದ ವರದಿಯಲ್ಲಿನ ಶಿಫಾರಸ್ಸುಗಳ ಅನುಷ್ಠಾನ** : ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

8> **ಡಿ. ದೇವರಾಜ ಅರಸು ನಂತರದ ಆಡಳಿತದ ಅವಧಿಗಳಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನ** : ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ವಿಚಾರಗೋಷ್ಠಿಗಳು :-**

1) "**ಕುಲಕಸುಬುದಾರರ ಶಿಕ್ಷಣ ಮತ್ತು ಉದ್ಯೋಗ–ಸಾಧಕ:ಬಾಧಕಗಳು**"ವಿಷಯ ಕುರಿತು ರಾಜ್ಯಮಟ್ಟದ ಹಾಗೂ ವಿಭಾಗಮಟ್ಟದ ವಿಚಾರಗೋಷ್ಠಿಗಳು
2) "**ಮಾಹಿತಿ ತಂತ್ರಜ್ಞಾನ ಮತ್ತು ಹಿಂದುಳಿದ ವರ್ಗಗಳು**" ವಿಷಯ ಕುರಿತು ರಾಜ್ಯಮಟ್ಟದ ವಿಚಾರಗೋಷ್ಠಿ

**ತರಬೇತಿ ಕಾರ್ಯಾಗಾರಗಳು :-**

1) ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಕಾರ್ಪೆಟ್ ತಯಾರಿಕೆ ತರಬೇತಿ ಕಾರ್ಯಾಗಾರ
2) ಅಲ್ಪಸಂಖ್ಯಾತರ ಜನಾಂಗದವರಿಗಾಗಿ ಸಮಗ್ರ ಅಭಿವೃದ್ಧಿ ಯೋಜನೆ ಕುರಿತು ಕಾರ್ಯಾಗಾರ
3) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಅವರ ವೃತ್ತಿಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು "**Equilibrium Thinking**" ತರಬೇತಿ ಕಾರ್ಯಾಗಾರ
4) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಸಿಬ್ಬಂದಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಅವರು ನಿರ್ವಹಿಸಬಹುದಾದ ಜವಾಬ್ದಾರಿ ಕುರಿತು "**ವೃತ್ತಿ ಉತ್ಕೃಷ್ಟತೆ**" ತರಬೇತಿ ಕಾರ್ಯಾಗಾರಗಳು.

5) ಸರ್ಕಾರದಿಂದ ಹಿಂದುಳಿದ ವರ್ಗಗಳಿಗಾಗಿ ಅನುಷ್ಠಾನಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಹಿಂದುಳಿದ ವರ್ಗಗಳ ಬಂಧುಗಳಲ್ಲಿ ಅರಿವು/ಜಾಗೃತಿಯನ್ನು ಉಂಟುಮಾಡಲು **"ಅರಿವು ಮೂಡಿಸುವ ಕಾರ್ಯಾಗಾರಗಳು"**

6) ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡುತ್ತಿದ್ದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಹಾಗೂ ಆಂಗ್ಲ ಭಾಷೆಗಳಲ್ಲಿ ಹೆಚ್ಚು ಪರಿಣತಿಯನ್ನು ಹೊಂದಲು **ಎಸ್.ಎಸ್.ಎಲ್.ಸಿ. ತರಬೇತಿ ಕಾರ್ಯಾಗಾರಗಳು.**

7) ಕಮ್ಮಾರ ಜನಾಂಗದವರಿಗೆ ತಮ್ಮ ಸಾಂಪ್ರದಾಯಿಕ ವೃತ್ತಿಗನ್ನು ಆಧುನೀಕರಣಗೊಳಿಸಿಕೊಳ್ಳಲು **"ವೃತ್ತಿ ಆಧುನೀಕರಣ"** ತರಬೇತಿ ಕಾರ್ಯಾಗಾರ.

8) ಗೋಂದಲಿ ಜನಾಂಗದ ಮಹಿಳೆಯರು ಸ್ವಾವಲಂಬಿಗಳಾಗಲು **"ಕೌದಿ ಹೊಲೆಯುವ"** ತರಬೇತಿ ಕಾರ್ಯಾಗಾರ.

9) ಅತೀ ಹಿಂದುಳಿದ ಕಟಬು ಜನಾಂಗದವರಿಗೆ ಅವರ ಕುಲಕಸುಬಾದ **ಮೀನು ಬಲೆ ಹೆಣೆಯುವ** ತರಬೇತಿ ಕಾರ್ಯಾಗಾರ

10) ಹಿಂದುಳಿದ ವರ್ಗಗಳ ಮಹಿಳೆಯರಿಗೆ **ಮಣ್ಣಿನ ಆಭರಣಗಳು, ರೇಷ್ಮೆ ಆಭರಣಗಳು ಹಾಗೂ ಹೋಂ ಕೆಮಿಕಲ್ಸ್** ತಯಾರಿಸಿ, ತಮ್ಮ ಸ್ವಂತ ಉದ್ಯೋಗ ಕೈಗೊಳ್ಳಲು ಆನೇಕಲ್ ತಾಲ್ಲೂಕಿನ ಚಂದಾಪುರದಲ್ಲಿ ಹಾಗೂ ಮಾಗಡಿಯಲಿ 3 ದಿನಗಳ ತರಬೇತಿ ಕಾರ್ಯಾಗಾರ ಹಾಗೂ ಭದ್ರಾವತಿಯಲ್ಲಿ 4 ದಿನಗಳ ತರಬೇತಿ ಕಾರ್ಯಾಗಾರ ಹಾಗೂ ಆರೋಗ್ಯ ಜಾಗೃತಿ ಶಿಬಿರ

**<u>ಹಿಂದುಳಿದ ವರ್ಗಗಳ ಬಗ್ಗೆ ಅಧ್ಯಯನ :-</u>**

ಈ ಕೆಳಕಂಡ ಹಿಂದುಳಿದ ವರ್ಗಗಳ ಸ್ಥಿತಿ-ಗತಿಗಳ ಬಗ್ಗೆ ಅಧ್ಯಯನವನ್ನು ನಡೆಸಲಾಗಿದೆ.

1. ಕುಣಬಿ
2. ಹೆಳವ
3. ಗೌಳಿ
4. ಹಾಲಕ್ಕಿ ವಕ್ಕಲ್
5. ದೇವಾಡಿಗ
6. ಕಾಡುಗೊಲ್ಲ ಜನಾಂಗದ ಸಮಗ್ರ ಸಾಹಿತ್ಯ ಸಂಸ್ಕೃತಿಯ ಅಧ್ಯಯನ
7. ಕುಂಚಟಿಗ ಜನಾಂಗದ ಕಟ್ಟೆಮನೆ, ಬಂಡಿಕಾರ, ಕೋಲ್ಕಾರ, ಅಮವಾಸ್ಯೆ ದೇವರು, ಪ್ರಜಾರಿಕೆ, ಯಜಮಾನ ಮತ್ತು ಬುಡಕಟ್ಟು ಸಂಸ್ಕೃತಿಗಳ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ
8. ಸವಿತಾ ಸಮುದಾಯದ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ
9. ಉಪ್ಪಾರ ಸಮುದಾಯದ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಇವರ ಸಹಯೋಗದೊಂದಿಗೆ ಈ ಕೆಳಕಂಡ ಅಲೆಮಾರಿ ಜನಾಂಗಗಳ ಅಧ್ಯಯನವನ್ನು ನಡೆಸಲಾಗಿದೆ.

1. ಬುಂಡೇಬೆಸ್ತರು
2. ಹೆಳವರು
3. ಸಿಕ್ಕಲಿಗರು
4. ಗೋಂದಲಿಗರು

**<u>ಸಮೀಕ್ಷೆ/ಮೌಲ್ಯಮಾಪನ :-</u>**

1. ಅಲ್ಪಸಂಖ್ಯಾತರ ಬಹುಮುಖ ಅಭಿವೃದ್ಧಿ ಯೋಜನೆ ಕುರಿತು ಬಿಜಾಪುರ, ಬೀದರ್ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಮೀಕ್ಷೆ
2. ಕೋಲಾರ, ಬೆಳಗಾಂ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಸಮೀಕ್ಷೆ/ಮೌಲ್ಯಮಾಪನ
3. ತುಮಕೂರು, ಉಡುಪಿ, ಬೀದರ್ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ **"ಗಂಗಾ ಕಲ್ಯಾಣ"** ಯೋಜನೆ ಅನುಷ್ಠಾನದ ಕುರಿತು ಸಮೀಕ್ಷೆ/ಮೌಲ್ಯಮಾಪನ
4. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಂಡಿರುವ **"ನ್ಯೂ ಸ್ವರ್ಣಿಮಾ"** ಯೋಜನೆ ಬಗ್ಗೆ ಸಮೀಕ್ಷೆ/ಮೌಲ್ಯಮಾಪನ

**<u>ಪ್ರಬಂಧ/ಭಾಷಣ/ಚಿತ್ರಕಲೆ :-</u>**

1. ಬೆಂಗಳೂರು ನಗರದಲ್ಲಿನ ಕಾಲೇಜು ವಿದ್ಯಾರ್ಥಿಗಳಿಗಾಗಿ **"ರಾಷ್ಟ್ರೀಯ ಭಾವೈಕ್ಯತೆ"** ವಿಷಯ ಕುರಿತು ಪ್ರಬಂಧ, ಭಾಷಣ ಹಾಗೂ ಚಿತ್ರಕಲೆಗಳ ಸ್ಪರ್ಧೆಗಳನ್ನು ನಡೆಸಲಾಗಿದೆ.
2. ಬೆಂಗಳೂರು ನಗರದಲ್ಲಿನ ಕಾಲೇಜು ವಿದ್ಯಾರ್ಥಿಗಳಿಗಾಗಿ **"ಕೋಮು ಸೌಹಾರ್ದತೆ"** ವಿಷಯ ಕುರಿತು ಪ್ರಬಂಧ, ಭಾಷಣ ಹಾಗೂ ಚಿತ್ರಕಲೆಗಳ ಸ್ಪರ್ಧೆಗಳನ್ನು ನಡೆಸಲಾಗಿದೆ.

**<u>ಚಿಂತನಾ ಸಭೆ :-</u>**

1. ಕೇಂದ್ರ ಸರ್ಕಾರದ **"ಕೆನೆ ಪದರ ನೀತಿ"** ಯ ಸಾಧಕ-ಬಾಧಕಗಳ ಕುರಿತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಅಧ್ಯಕ್ಷರ ಸಮಕ್ಷಮದಲ್ಲಿ ಚಿಂತನಾ ಸಭೆಯನ್ನು ನಡೆಸಲಾಗಿದೆ.

**<u>ವಿಚಾರ ಕಮ್ಮಟ :-</u>**

1. **"ಹಿಂದುಳಿದ ವರ್ಗಗಳ ಸಂಚಲನ ಹಾಗೂ ಸೌಲಭ್ಯಗಳು"** ವಿಷಯ ಕುರಿತು ಶಿವಮೊಗ್ಗ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗಾಗಿ 5 ದಿನಗಳ ವಿಚಾರ ಕಮ್ಮಟ ನಡೆಸಲಾಗಿದೆ.

**<u>ಅರಿವು ಹಾಗೂ ಆರೋಗ್ಯ ಜಾಗೃತಿ ಅಭಿಯಾನ :-</u>**

1. ಕಾಡುಗೊಲ್ಲ ಜನಾಂಗದವರು ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡು ಬರುತ್ತಿರುವ ಸಾಮಾಜಿಕ ಪದ್ಧತಿಗಳಾದ ಮೈನೆರೆಯುವುದು, ಮುಟ್ಟು ಮತ್ತು ಹುಟ್ಟುಗಳ ಸಂದರ್ಭಗಳಲ್ಲಿನ ಮೂಢನಂಬಿಕೆಗಳನ್ನು ನಿರ್ಮೂಲನಗೊಳಿಸಲು ಹಾಗೂ ವೈಜ್ಞಾನಿಕ ತಿಳುವಳಿಕೆ ಮೂಡಿಸಲು **"ಅರಿವು ಹಾಗೂ ಆರೋಗ್ಯ ಜಾಗೃತಿ ಅಭಿಯಾನ"**ವನ್ನು ತುಮಕೂರು ಜಿಲ್ಲೆಯಲ್ಲಿನ ಕಾಡುಗೊಲ್ಲರ ಹಟ್ಟಿಗಳಲ್ಲಿ ನಡೆಸಲಾಗಿದೆ.

**<u>ಪುಸ್ತಕ ಪ್ರಕಟಣೆ :-</u>**

ಈ ಸಂಸ್ಥೆಯವತಿಯಿಂದ ಈ ಕೆಳಕಂಡ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

1. **ಸಾಧನೆಗಳ ಸರದಾರ** (ಡಿ. ದೇವರಾಜ ಅರಸುರವರ ಜೀವನ/ಚಿಂತನೆ/ಸಾಧನೆಗಳು)
2. **ಮೀಸಲಾತಿ ಪ್ರಸ್ತುತತೆ** (ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಂದ ನಡೆಸಲಾದ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿದ್ದ ಆಯ್ದ ಪ್ರಬಂಧಗಳ ಸಂಗ್ರಹ)
3. **ಡಿ. ದೇವರಾಜ ಅರಸು ಚಿಂತನೆ-ಸಾಧನೆ** : ಡಿ. ದೇವರಾಜ ಅರಸುರವರ ಜೀವನ ಹಾಗೂ ಸಾಧನೆಗಳು)
4. **The Bangalore Initiative** (ಖಾಸಗಿ ವಲಯದಲ್ಲಿ ಮೀಸಲಾತಿ ವಿಷಯದ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಫಲಶೃತಿ)
5. **ಸಮಾಜ ಕಲ್ಯಾಣದ ದಾರ್ಶನಿಕ ದ್ರಷ್ಟಾರ** (ಡಿ. ದೇವರಾಜ ಅರಸುರವರ ಚಿಂತನೆಗಳ ಬಗ್ಗೆ ವಿದ್ಯಾರ್ಥಿಗಳಿಂದ ಮಂಡಿಸಲಾದ ಪ್ರಬಂಧಗಳ ಸಂಗ್ರಹ)
6. D. Devaraj Urs-The Champion of social justice (Achievements of D. Devaraj Urs)
7. ವಾರ್ತಾ ಇಲಾಖೆಯ ಸಹಯೋಗದೊಂದಿಗೆ ಡಿ. ದೇವರಾಜ ಅರಸುರವರ ಚಿತ್ರಗಳ **"ಅರಸು ಆಲ್ಬಂ"**ಪ್ರಕಟಣೆ
8. ಡಿ. ದೇವರಾಜ ಅರಸುರವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಅರಸುರವರನ್ನು ಕುರಿತು ಗಣ್ಯ ವ್ಯಕ್ತಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಗ್ರಹಣೆಯನ್ನು **"ಬಡವರ ಭಾಗ್ಯನಿಧಿಗೆ ನೂರೆಂಟು ನಮನಗಳು"** ಪುಸ್ತಕದ ಪ್ರಕಟಣೆ
9. **ಮರೆಯಲಾಗದ ಮಾಣಿಕ್ಯ-ಡಿ. ದೇವರಾಜ ಅರಸು** : ಭಾಗ-1 ಹಾಗೂ ಭಾಗ-2

**<u>ಸಾಕ್ಷ್ಯಚಿತ್ರ ನಿರ್ಮಾಣ :–</u>**

ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯವತಿಯಿಂದ ಈ ಕೆಳಕಂಡ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ.

1. ಡಿ. ದೇವರಾಜ ಅರಸು ರವರ ಜೀವನ–ಸಾಧನೆಗಳನ್ನು ಬಿಂಬಿಸುವ ಸಾಕ್ಷ್ಯಚಿತ್ರ.

2. "**ಹೆಳವ**" ಜನಾಂಗದ ಸ್ಥಿತಿ–ಗತಿಗಳ ಕುರಿತು ಸಾಕ್ಷ್ಯಚಿತ್ರ.

3. "**ಕಾಡುಗೊಲ್ಲ**" ಜನಾಂಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ 3 ಸಾಕ್ಷ್ಯಚಿತ್ರಗಳ ನಿರ್ಮಾಣ:

**ಅ) ಕಾಡುಗೊಲ್ಲರ ಗೆಣೆಪದಗಳು**

**ಆ) ಕಾಡುಗೊಲ್ಲರ ಮೌಖಿಕ ಸಾಹಿತ್ಯ**

**ಇ) ಕ್ಯಾತದೇವನ ಜಾತ್ರೆ**

4. **ದೊಂಬಿದಾಸ**

5. **ಬುಡಬುಡಕೆ**

6. **ಡವೇರಿ**

7. **ಸವಿತಾ ಸಮಾಜ**

8. **ಮಡಿವಾಳ ಜನಾಂಗ**

9. **ತಿಗಳ ಜನಾಂಗ**

10. **ಡಿ. ದೇವರಾಜ ಅರಸು ರವರ ಬಗ್ಗೆ ಅವರ ಒಡನಾಡಿಗಳು, ಸಾಹಿತಿಗಳ ವೀಡಿಯೋ ಸಂದರ್ಶನ**

11, **ಡಿ. ದೇವರಾಜ ಅರಸು ರವರ ಹುಟ್ಟೂರಾದ ಬೆಟ್ಟದ ತುಂಗ ಹಾಗೂ ಬೆಳೆದ ಕಲ್ಲಹಳ್ಳಿ ಗ್ರಾಮಗಳ ಅಭಿವೃದ್ಧಿ ಬಗ್ಗೆ ಸಾಕ್ಷ್ಯಚಿತ್ರ**

12. **ಪಿಚಗುಂಟಲ**

13. **ಕಿಲ್ಲಿಕ್ಯಾತ**

14. **ಜೋಗಿ**

15. **ಬೈಲಪತ್ತರ್**

**ಕುಲಶಾಸ್ತ್ರೀಯ ಅಧ್ಯಯನ :–**

1. **ಕುಂಚಟಿಗ ಜನಾಂಗ ಹಾಗೂ ಇದರಲ್ಲಿನ ಉಪಜನಾಂಗಗಳು**
2. **ಸವಿತಾ ಜನಾಂಗ**
3. **ಉಪ್ಪಾರ ಜನಾಂಗ**

ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯವತಿಯಿಂದ ಕೈಗೊಂಡಿರುವ ಕೆಲವು ಕಾರ್ಯಕ್ರಮಗಳ ಇಣುಕು ವಿಮರ್ಶೆಗಳು :

2. ಈ ಸಂಸ್ಥೆಯವತಿಯಿಂದ ನಡೆಸಲಾದ **"ಖಾಸಗಿ ವಲಯದಲ್ಲಿ ಮೀಸಲಾತಿ"(Affirmative action in private sector)**ವಿಷಯದ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಫಲಶೃತಿಯಾದ The Bangalore Initiative ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ವಿಚಾರ ಸಂಕಿರಣದಲ್ಲಿ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಹಾಗೂ ಅಂತರಾಷ್ಟ್ರೀಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಖಾಸಗಿ ವಲಯದಲ್ಲಿ ಮೀಸಲಾತಿ ನೀಡುವ ಬಗ್ಗೆ ಆರೋಗ್ಯಕರ ಚರ್ಚೆ ನಡೆಸಿರುತ್ತಾರೆ.
3. ಈ ಸಂಸ್ಥೆಯವತಿಯಿಂದ ನಡೆಸಲಾದ "ಕುಲಕಸುಬುದಾರರ ಶಿಕ್ಷಣ ಹಾಗೂ ಉದ್ಯೋಗ – ಸಾಧಕ:ಬಾಧಕಗಳು" ವಿಷಯದ ವಿಚಾರಗೋಷ್ಠಿಗಳ ಫಲವಾಗಿ ಆಗಿನ ಸರ್ಕಾರ ಹಿಂದುಳಿದ ವರ್ಗಗಳ ಕುಲಕಸುಬುದಾರರಿಗೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದವತಿಯಿಂದ **"ಶ್ರಮಶಕ್ತಿ"** ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಯೋಜನೆಯಿಂದ ಹಿಂದುಳಿದ ವರ್ಗಗಳ ಕುಲಕಸುಬುದಾರ ವೃತ್ತಿಗಳಿಗೆ ಹೆಚ್ಚು ಸಹಾಯವಾಗಿದೆ.
4. ಈ ಸಂಸ್ಥೆಯವತಿಯಿಂದ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಸಿಬ್ಬಂದಿಗಳಿಗೆ ನಡೆಸಲಾದ **"ವೃತ್ತಿ ಉತ್ಕೃಷ್ಟತೆ"** ತರಬೇತಿ ಕಾರ್ಯಾಗಾರಗಳಿಂದ ವಿದ್ಯಾರ್ಥಿನಿಲಯಗಳ ಸಿಬ್ಬಂದಿಗಳಲ್ಲಿ ಸಕಾರಾತ್ಮಕ ಬದಲಾವಣೆಗಳಾಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆಯಲ್ಲಿ ಸುಧಾರಣೆ ಆಗಿರುವುದು ಕಂಡುಬಂದಿರುತ್ತದೆ.
5. ಈ ಸಂಸ್ಥೆಯವತಿಯಿಂದ ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗಾಗಿ ನಡೆಸಲಾದ ತರಬೇತಿ ಕಾರ್ಯಾಗಾರಗಳ ಫಲವಾಗಿ ಆಯಾ ಜಿಲ್ಲೆಗಳಲ್ಲಿನ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಸುಧಾರಣೆ ಕಂಡುಬಂದಿದೆ.
6. ಕಾಡುಗೊಲ್ಲ ಜನಾಂಗದವರಲ್ಲಿನ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಂಸ್ಥೆಯವತಿಯಿಂದ ತುಮಕೂರು ಜಿಲ್ಲೆಯಲ್ಲಿ ನಡೆಸಲಾದ **ಅರಿವು ಮೂಡಿಸುವ ಹಾಗೂ ಆರೋಗ್ಯ ಜಾಗೃತಿ ಅಭಿಯಾನ**ದಲ್ಲಿ ತಮ್ಮ ಜನಾಂಗದಲ್ಲಿನ ಮೂಢನಂಬಿಕೆಗಳನ್ನು ಆಚರಿಸುವುದಿಲ್ಲವೆಂದು ಈ ಜಿಲ್ಲೆಯ ಬಹಳಷ್ಟು ಕಾಡುಗೊಲ್ಲ ಜನಾಂಗದ ಕುಟುಂಬಗಳು ಸ್ವಯಂ ಪ್ರೇರಿತರಾಗಿ ಪ್ರಮಾಣ ಮಾಡಿರುವುದು ಈ ಅಭಿಯಾನಗಳ ಸಾರ್ಥಕತೆಯನ್ನು ಬಿಂಬಿಸುತ್ತದೆ.

7. ಸಂಸ್ಥೆಯವತಿಯಿಂದ ನಡೆಸಲಾದ **ರಾಷ್ಟ್ರೀಯ ಭಾವೈಕ್ಯತೆ ಹಾಗೂ ಕೋಮು ಸೌಹಾರ್ಧತೆ** ವಿಷಯಗಳ ಕುರಿತಾದ ಪ್ರಬಂಧ, ಭಾಷಣ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರಬಂಧ, ಭಾಷಣ ಹಾಗೂ ಚಿತ್ರಕಲೆಗಳ ಮೂಲಕ ದೇಶದ ಸಮಗ್ರತೆಯನ್ನು ಕಾಪಾಡಲು ರಾಷ್ಟ್ರೀಯ ಭಾವೈಕ್ಯತೆ ಹಾಗೂ ಕೋಮು ಸೌಹಾರ್ಧತೆಗಳ ಅಗತ್ಯವನ್ನು ಎತ್ತಿಹಿಡಿದಿದ್ದಾರೆ.
8. ಸಂಸ್ಥೆಯವತಿಯಿಂದ ನಡೆಸಲಾದ ಕೇಂದ್ರ ಸರ್ಕಾರದ **ಕೆನೆ ಪದರ ನೀತಿ** ವಿಷಯದ ಚಿಂತನಾ ಸಭೆಯ ಫಲವಾಗಿ ಕೆನೆಪದರ ನೀತಿಯ ಒಂದು ಭಾಗವಾದ ವಾರ್ಷಿಕ ಆದಾಯ ಮಿತಿ ಇಂದು ಹೆಚ್ಚಳವಾಗಿ, ಅನೇಕ ಹಿಂದುಳಿದ ವರ್ಗಗಳಿಗೆ ಅನುಕೂಲವಾಗಿದೆ.
9. ಕಮ್ಮಾರ ಜನಾಂಗದವರಿಗಾಗಿ ಸಂಸ್ಥೆಯವತಿಯಿಂದ ನಡೆಸಲಾದ **"ವೃತ್ತಿ ಆಧುನೀಕರಣ"** ತರಬೇತಿ ಕಾರ್ಯಾಗಾರದಿಂದ ಕಮ್ಮಾರ ಜನಾಂಗದವರು ತಮ್ಮ ವೃತ್ತಿಗಳನ್ನು ಉತ್ತಮ ತಂತ್ರಜ್ಞಾನದಿಂದ ಆಧುನೀಕರಣಗೊಳಿಸಿಕೊಂಡು ಹೆಚ್ಚು ಸ್ವಾವಲಂಬಿಗಳಾಗಿರುತ್ತಾರೆಂದು ಸಂಸ್ಥೆಯು ಆಶಿಸುತ್ತದೆ.
10. ಗೋಂದಲಿಗ ಜನಾಂಗದ ಮಹಿಳೆಯರಿಗಾಗಿ ನಡೆಸಲಾದ **"ಕೌದಿ ಹೊಲೆಯುವ ತರಬೇತಿ"** ಯಿಂದ ಗೋಂದಲಿಗ ಜನಾಂಗದ ಅನೇಕ ಮಹಿಳೆಯರು ಸ್ವಂತ ವೃತ್ತಿಯನ್ನು ಕೈಗೊಂಡು ಸ್ವಾವಲಂಬಿಗಳಾಗಲು ಈ ಕಾರ್ಯಕ್ರಮ ಸಹಾಯಕವಾಗಿರುತ್ತದೆ.
11. ಈ ಸಂಸ್ಥೆಯವತಿಯಿಂದ ನಡೆಸಲಾದ **"ಹೆಳವ"** ಜನಾಂಗದವರ ಪ್ರಗತಿಗಾಗಿ ಸಂಸ್ಥೆಯ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿ ಸದರಿ ಶಿಫಾರಸ್ಸುಗಳ ಅನುಷ್ಠಾನಕ್ಕೆ ಆದೇಶ ಹೊರಡಿಸಿದೆ.

# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು

## ಸಂಸ್ಥೆಯವತಿಯಿಂದ ಇದುವರೆವಿಗೂ ನಡೆಸಲಾಗಿರುವ ಕುಲಶಾಸ್ತ್ರೀಯ ಅಧ್ಯಯನಗಳ ವಿವರಗಳು

| ಕ್ರ.ಸಂ. | ಜನಾಂಗದ ಹೆಸರು | ಪ್ರವರ್ಗ | ಯಾವ ವಿಶ್ವವಿದ್ಯಾನಿಲಯದ ಸಹಯೋಗ | ಷರಾ |
|---|---|---|---|---|
| 1) | ಕುಂಚಿಟಿಗ | 3–ಎ<br>ಕ್ರ.ಸಂ. 1 (L) | ಮೈಸೂರು ವಿಶ್ವವಿದ್ಯಾನಿಲಯ | ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. |
| 2) | ಸವಿತಾ | 2–ಎ<br>ಕ್ರ.ಸಂ. 8 (w) | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ | ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. |
| 3) | ಉಪ್ಪಾರ | ಪ್ರವರ್ಗ–1<br>ಕ್ರ.ಸಂ. 53 (a) | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ | ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. |
| 4) | ದೇವಾಂಗ | 2–ಎ<br>ಕ್ರ.ಸಂ. 75 (a) | ಮೈಸೂರು ವಿಶ್ವವಿದ್ಯಾನಿಲಯ | ಅಧ್ಯಯನ ಪ್ರಗತಿಯಲ್ಲಿದೆ |
| 5) | ತಿಗಳ | 2–ಎ<br>ಕ್ರ.ಸಂ. 10 (h) | ಬೆಂಗಳೂರು ವಿಶ್ವವಿದ್ಯಾನಿಲಯ | ಅಧ್ಯಯನ ಪ್ರಗತಿಯಲ್ಲಿದೆ |
| 6) | ಕುಂಬಾರ | 2–ಎ<br>ಕ್ರ.ಸಂ. 6 (a) | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ | ಅಧ್ಯಯನ ಪ್ರಗತಿಯಲ್ಲಿದೆ |
| 7) | ವಿಶ್ವಕರ್ಮ ಹಾಗೂ ಅದರ ಉಪಪಂಗಡಗಳು | 2–ಎ<br>ಕ್ರ.ಸಂ. 11 ರಲ್ಲಿ 41 ಉಪಪಂಗಡಗಳು | ಮೈಸೂರು ವಿಶ್ವವಿದ್ಯಾನಿಲಯ | ಅಧ್ಯಯನ ಪ್ರಗತಿಯಲ್ಲಿದೆ |